ಸಿಗೇವ್ ತನ್ನ ಜೇಬು ತಡಕಾಡಿ ನೋಡಿದ. ಹದಿನೈದು ಕೊಪೆನ್ ಸಿಕ್ಕಿತು. ಅದನ್ನ ತೆಗೆದುಕೊಂಡು ಔಷಧಿ ಅಂಗಡಿಗೆ ಹೋಗಿ ಮುಕ್ಕಾಲು ಗಂಟೆ ನಂತರ ವಾಪಸ್ಸು ಬಂದ.

'ಇದೋ ಕುಡಿ... ಎಲ್ಲ ಒಂದೇ ಸಲಕ್ಕೆ ನೇರ ಹಾಗೇ ಕುಡಿದುಬಿಡು...' ಎಂದು ಶಿಚಿಪ್‌ತ್ಸೋವ್‌ನ ಬಾಯಿಗೆ ಒಂದು ಬಾಟಲ್ ಹಿಡಿದ. ಶಿಚಿಪ್‌ತ್ಸೋವ್ ಸುಮ್ಮನೆ ಕುಡಿಯಲು ಆರಂಭಿಸಿದ.

'ಹ... ಹಾಗೆ... ಈಗ ಲವಂಗದ ನೀರಿನಿಂದ ಬಾಯಿ ಮುಕ್ಕಳಿಸು. ಹೇಗೆ ಅಂದರೆ ನಿನ್ನ ಆತ್ಮ ನಿನ್ನ ಬಾಯಿಂದ ಹೊರಡ್ತಿರೊ ಗಬ್ಬು ವಾಸನೆ ಹೊರಟುಹೋಗಬೇಕು ಹಾಗೆ...'

ಸಿಗೇವ್, ಕಾಯಿಲೆ ಬಿದ್ದಿರುವ ಶಿಚಿಪ್‌ತ್ಸೋವ್‌ನಿಂದ ಕೊಂಚ ದೂರದಲ್ಲಿ ಕೂತು, ನಂತರ ತುಂಬ ಮೃದುವಾಗಿ ಅವನಿಗೆ ಮತ್ತಿಕ್ಕಿ ಹೊರನಡೆದ.

ಸಂಜೆ ಹೊತ್ತಿಗೆ ಜಿಯಾನ್ ಪ್ರೀಮಿಯರ್‌ನ ಬ್ರಮಾ ಗಿಲ್ನಸ್ಕಿ ಶಿಚಿಪ್‌ತ್ಸೋವ್‌ನ ನೋಡಲು ಬಂದ. ಆ ವರನಟರುನ್ನೆಲ್ಲ ಶೂಗಳನ್ನ ಹಾಕಿಕೊಂಡಿದ್ದ. ಎಡ ಹಸ್ತಕ್ಕೆ ಗ್ಲೌಸ್ ಹಾಕಿಕೊಂಡು ಸಿಗಾರ್ ಸೇದುತ್ತಿದ್ದ. ಇಷ್ಟಾಗಿಯೂ ಅವನ ಮೈಯಿಂದ ಕೆಟ್ಟ ವಾಸನೆ ಹೊರಹೊಮ್ಮುತ್ತಿತ್ತು. ಪ್ರಯಾಣದ ವೇಳೆ ಆತ ಎಂಥ ಜಾಗದಲ್ಲಿ ಇಳೀಬೇಕಾಗಿ ಬಂದಿತ್ತು ಅಂದರೆ ಅಲ್ಲಿ ಸ್ನಾನ ಗೃಹಗಳು, ಧೋಬಿಗಳು, ಟೈಲರ್‌ಗಳು ಯಾವುದೂ, ಯಾರೂ ಇರಲಿಲ್ಲ.

'ನಿನಗೆ ಕಾಯಿಲೆ ಆಗಿದೆ ಅಂತ ಕೇಳ್ಪಟ್ಟೆ. ಏನು ತೊಂದರೆ ನಿನಗೆ? ನಿಜಕ್ಕೂ ಏನಾಗಿದೆ ನಿನಗೆ?' ತಾನು ನಿಂತಿರುವ ಕಡೆಯೇ ಸುಳಿತಿರುಗುವಂತೆ ತಿರುಗುತ್ತ ಕೇಳಿದ.

ಶಿಚಿಪ್‌ತ್ಸೋವ್ ಮಾತಾಡಲಿಲ್ಲ. ಹಾಗೂ ಒಂದಿಷ್ಟೂ ಕದಲಲಿಲ್ಲ.

'ನೀನು ಯಾಕೆ ಮಾತಾಡ್ತಿಲ್ಲ? ತಲೆ ಸುತ್ತು ಬರ್ತಿದ್ಯ ನಿನಗೆ? ಹಾಗಿದ್ರೆ ಮಾತಾಡೋದು ಬೇಡ. ನಾನು ನಿನಗೆ ತೊಂದರೆ ಕೊಡಲಾರೆ. ಮಾತಾಡಬೇಡ...'

ಬ್ರಮಾ ಗಿಲ್ನಸ್ಕಿ (ಇದು ಆತನನ್ನ ರಂಗದ ಮೇಲೆ ಕರೆಯುವ ಹೆಸರು. ಪಾಸ್‌ಪೋರ್ಟ್‌ನಲ್ಲಿ ಅವನ ಹೆಸರು ದಾಖಲಾಗಿರುವುದು 'ಗುಸ್ಕೋವ್') ಕಿಟಕಿ ಬಳಿ ನಡೆದು ತನ್ನ ಜೇಬಿನೊಳಗೆ ಕೈಗಳನ್ನ ಇಳಿಬಿಟ್ಟು ಬೀದಿಯನ್ನೇ ದಿಟ್ಟಿಸುತ್ತಾ ನಿಂತುಕೊಂಡ. ಕಸದ ರಾಶಿಯನ್ನ ತುಂಬಿಕೊಂಡ ಒಂದು ಗಾಡಿ ಅವನ ಕಣ್ಣಿಗೆ ಬಿತ್ತು. ಸರಳುಗಳ ಪಂಜರದೊಳಗೆ ಆ ಕಸದ ಕುಪ್ಪೆಯ ಕಾರ್ಖಾನೆಯೇ ಇದ್ದಂತೆ ಇತ್ತು. ಕೊಂಚ ದೂರದಲ್ಲಿ ಹೊತ್ತಿ ಉರಿಯುತ್ತಿರುವ ಚಿಮಣಿ; ಅದು ಉಗುಳುತ್ತಿರುವ ಹೊಗೆಯ ಸುತ್ತ ಜ್ಯಾಕ್‌ಡಾ ಎನ್ನುವ ಹಕ್ಕಿ ಹಾರಾಡುತ್ತಿರುವುದು ಕಂಡಿತು. ಇಂಥ ಶುಷ್ಕ, ನಿರ್ಜೀವ ದೃಶ್ಯ ಇನ್ನೇನು ಕವಿಯುತ್ತಿರುವ ಸಂಜೆಯಲ್ಲಿ ಅನಾವರಣಗೊಳ್ಳಲು ಆರಂಭಿಸಿತ್ತು.

'ನಾನು ಮನೆಗೆ ಹೋಗಬೇಕು...' ಎಂದು ಶಿಚಿಪ್‌ತ್ಸೋವ್ ಅಂದದ್ದು ಬ್ರಮಾ ಗಿಲ್ನ್‌ಸ್ಕಿಗೆ ಕೇಳಿಸಿತು.

'ಎಲ್ಲಿದೆ ಮನೆ?' ಗಿಲ್ನ್‌ಸ್ಕಿ ಕೇಳಿದ.

'ವ್ಯಾಜ್ಮಾದಲ್ಲಿ... ನನ್ನ ಮನೆಗೆ...'

'ವ್ಯಾಜ್ಮಾ ಇಲ್ಲಿಂದ ಸಾವಿರ ಮೈಲಿ ದೂರದಲ್ಲಿದೆ ಹುಡುಗಾ...' ಎನ್ನುತ್ತ ಬ್ರಮಾ ಗಿಲ್ನ್‌ಸ್ಕಿ ಕಿಟಕಿಯ ಸರಳುಗಳ ಮೇಲೆ ತಬಲ ನುಡಿಸುವಂತೆ ನುಡಿಸಿ 'ವ್ಯಾಜ್ಮಾಗೆ ನೀನು ಯಾಕೆ ಹೋಗಬೇಕು?...' ಎಂದು ಕೇಳಿದ.

'ಅಲ್ಲಿ ನಾನು ಸಾಯಬೇಕು...'